ಮೈಸೂರ ಗೆಜೆಟ್.

ನಂ. 8 ಸರ್ಕಾರದಿಂದ ಫಾಯಿಷ್ ಆದ್ದು. ಸ್ 1887.

ಬೆಂಗಳೂರು, ಶನಿವಾರ, ಫಿಬ್ರವರೀ ತಾ|| 26, ಸ್ 1887.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಇನಾಂ ಸೂಪರ್‌ಟೆಂಡೆಂಟರು, ಕಾಂಪೆಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷ್ಷ ಜಡ್ಜೀರು, ಡಿ|| ಡೆಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್‌ಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್‌ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇರ್ಷಗಳು, ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 1ನೇ ಫಿಬ್ರವರೀ 1887.

ನಂ. 230.—ಸಕಲಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೀಯಲ್ಲಿ ನಮೂದಿಸಿದ ಪ್ರಕಾರ) ಜೋಡೀ ವ ಕಾಯಂಗುತ್ತಾದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈಕೆಳಗೆಕಂಡ ಜೋಡೀ ವ ಕಾಯಂಗುತ್ತಾ ಗ್ರಾಮಗಳು ಇದರಡೀಕಂಡ ತಖ್ತೀಯಲ್ಲಿ ನಮೂದಿರುವ ಸ್ಥಳಗಳಲ್ಲೂ ವ ತಾರೀಖುಗಳಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳ್ಗೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಚಡ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಬಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್‌ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯೂಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜ್ ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಕೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರು ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ತ್ಯಸ್ಥರಿಂದ ರುಜೂ ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮುವುಕೂಫ್ ಮಾಡಲ್ಪಡತಕ್ಕದ್ದು. ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಕಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟೀ ಕಮ್ಮಿಷನರವರಿಂದ ರುಜೂ ಮೊಹರ್ ಮಾಡೋಣಾದ ಬಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲ್‌ನಲ್ಲಾಗಲಿ ಅಂದಾಜಾ ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ಲತಿಗಳಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ ಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವಂತಕ್ರಮವುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕ್ಕುಮಿಗೆ ಸದರೀ ಕ್ರಯವು ಒಳಪಟ್ಟು ಯಿರುತ್ತೆ.

ಡಿಸ್ಟ್ರಿಕ್ಟ್.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀವ ಕಾಯಂಗುತ್ತಾದಾರರ ಹೆಸರು.	ಅಂದಾಜಾ ಒಣ ಜವರೀ.	ಅಂದಾಜಾ ಹುಟ್ಟುವಳೀ ಯಾ ಬೇರೀಜು.	ನಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕೈವಟೆರೆಂಟ್.	ಯಾವಬಾಕೀಗೋಸ್ಕರ ಗ್ರಾಮಗಳು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕೀ.	ಹರಾಜು ತಾರೀಖು ವಗೈರೆ.
					ಎ. ಗುಂ. ಗ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಮೈಸೂರು.	ನಂಜನಗೂಡು.	ಹೊನ್ನಾಳೀ.	ಕಂಚಿಗನಹಳ್ಳಿ (ಜೋಡಿ)	ವೆಂಕಣ್ಣಾಚಾರ್ ವ ಇತರ 3 ಜನಗಳು	335 58 0	390 0 0	262 0 0	262 15 11	1887ನೇ ಇಸವಿ ಮಾರ್ಚೀ ತಾ|| 10ರಲ್ಲು ತಾಲ್ಲೂಕು ಕಚೇರಿಯಲ್ಲಿ ಅಮಲ್ದಾರ್ರ ರೂಬರೂ.
		ನಾಗನಹಳ್ಳೀ.	ವೆಂಕಟನಾರಣಪ್ಪನದೊಡ್ಡಿ 1 ಕಾಯಂಗು	ಕೆಸ್ತೂರು ಪುಟ್ಟಣ್ಣ	ಖುಸ್. ಕೂ. ಪ. 5 0 0	29 0 0	30 13 0	48 8 3	ಡಿಟೋ ತಾರೀಖು 14ರಲ್ಲು ಡಿಟೋ
		ತಾ.	ಚಂಚುಂಚಿನಹಳ್ಳಿ (ಜೋಡಿ)	ಶಂಕರನಾರಣಭಟ್ಟ ವ ಇತರ 46 ಜನಗಳು	ಎ. ಗುಂ. ಗ. 140 19 0	364 0 0	128 9 0	230 1 3	ಡಿಟೋ ತಾರೀಖು 10ರಲ್ಲು ಡಿಟೋ.
	ಚಾಮರಾಜನಗರ.	ಚಾಮರಾಜನಗರ.	ಮಾದಾಪುರ (ಜೋಡಿ)	ಲಕ್ಷ್ಮಮ್ಮ ಉರಫ್ ಲಕ್ಷ್ಮಮ್ಮ ವ ಇತರ 26 ಜನಗಳು	448 5 0	726 12 0	156 0 9	158 5 11	ಡಿಟೋ ಡಿಟೋ

ತಾರೀಖು 21ನೇ ಜನವರೀ 1887.

ನಂ. 223.—1877ನೇ ಇಸವಿ ಜುಲೈ 14ನೇ ಮರ್ಕುಮಿನ ಮೈಸೂರ ಗೆಜೆಟ್ 198ನೇ ಪುಟದಲ್ಲಿ ಛಾಪಿಸೋಪಾದ ಆದೇ ಇಸವಿ ಜುಲೈ 10ನೇ ಮರ್ಕುಂವುಳ್ಳ ಲೇಟ್ ಚೀಫ್ ಕಮ್ಮಿಷ್ಠರವರ 100ನೇ ನಂಬರ್ ಇಸ್ತಿಹಾರ್‌ನಾಮೆಯನ್ನ ಬದಲಾಯಿಸಿ ಇದರದೆಶೆಯಿಂದ ಪ್ರಕಟಪಡಿಸುವದೇನಂದರೆ, ಶಿವಮೊಗ್ಗಾ, ವ ಕಡೂರು ಡಿಸ್ಟ್ರಿಕ್ಟುಗಳಲ್ಲಿ ಜೊಂಬುಗಳಿಗೋಸ್ಕರ, ಅಂಥಾ ಜೊಂಬುಗಳು ತೆಪ್ಪದಮೂಲಕ ವಾಗಲೀ ಭಂಡಿಗಳಮೇಲಾಗಲೀ ಸಾಗಿಸಲ್ಪಟ್ಟಾಗ್ಯೂ, ಕೊಡಲ್ಪಡುವ ಲೈಸೆನ್ಸುಗಳಿಗೋಸ್ಕರ ಇದರಡೀಕಂಡ ದರಗಳು ಮತ್ತೊಂದು ಹುಕ್ಕುಂ ಕೊಡುವ ಪರಿಯಂತ ವಸೂಲ್ಮಾಡಲ್ಪಡತಕ್ಕದ್ದು :—

ಹೆಬ್ಬಿದುರುಗಳಿಗೆ ದರ 100ಕ್ಕೆ 7 ರೂಪಾಯಿ ಪ್ರಕಾರ.
ಕಿರೀ ಬಿದುರುಗಳಿಗೆ, ದರ 100ಕ್ಕೆ ರೂ. 2—8—0 ರ ಪ್ರಕಾರ.

ತಾರೀಖು 10ನೇ ಫಿಬ್ರವರೀ 1887.

ನಂ. 238.— ಇದರಡೀಕಂಡ ಗ್ರಾಮಗಳ ವರ್ಗಾವರ್ಗಿಗಳು ಹುಕ್ಕುಂ ಮಾಡಲ್ಪಟ್ಟಿರುತ್ತವೆ:—

ಗ್ರಾಮದ ಹೆಸರು.	
1. ಪಾಪನಹಳ್ಳಿ ರ್ಯಾಗಡಿ	ಹೊಸಕೋಟೆ ತಾಲ್ಲೂಕಿನಿಂದ—ದೇವನಹಳ್ಳಿ ತಾಲ್ಲೂಕಿಗೆ.
2. ವರದೇನಹಳ್ಳಿ ಡಿಟೋ	
3. ಗುಮ್ಮನಹಳ್ಳಿ	
4. ಹೊಸೂರು ಕಾಯಂಗುತ್ತಾ —ಚಿಕ್ಕಬಳ್ಳಾಪ್ರರದ ತಾಲ್ಲೂಕಿನಿಂದ	

ತಾರೀಖು 5ನೇ ಫಿಬ್ರವರೀ 1887.

ನಂ. 233.—ಸ್ಯ 1884ನೇ ಇಸವಿ ಡಿಶಂಬರ್ 12ನೇ ಮರ್ಕುಂ 187ನೇ ನಂಬರ್ ಇಸ್ತಿಹಾರ್‌ನಾಮೆಯೊಡನೆ ಫಾಯಿಷ್ಮಾಡಲ್ಪಟ್ಟ, ಅಡ್ವೊಕೇಟ್ ವ ಪ್ಲೀಡರುಗಳಾಗಿ ದಾಖಲ್ಮಾಡಿಕೊಳ್ಳುವದಕ್ಕೋಸ್ಕರ ಅವರುಗಳ ಯೋಗ್ಯತೆ ವಗೈರೆ ವಿಷಯಿಕವಾದ ನಿಬಂಧನೆಗಳ ಇದರಡೀ ಕಂಡ ತಿದ್ದುಪಾಟುಗಳು, ಸರ್ವರ ತಿಳುವಳಿಕೆ ಬಗ್ಯೆ ಪ್ರಕಟಿಸಲ್ಪಡುತ್ತೆ :—

ಸದರೀ ನಿಬಂಧನೆಗಳ IVನೇ ನಿಬಂಧನೆಗೆ ಇದರಡೀ ಬರುವದನ್ನು ಕೇರಿಸತಕ್ಕದ್ದು—

"ಯೆರಡನೇ ಗ್ರೇಡ್ ಪ್ಲೀಡರುಗಳ ವಿಷಯದಲ್ಲಿ, ಅಂಥಾವರು ಐದು ವರುಷಗಳಿಗಿಂತ ಕಮ್ಮಿ ಇಲ್ಲದ ಕಾಲಪರಿಯಂತ ಪ್ಲೀಡರು ಕೆಲಸ ಜರಗಿಸುತ್ತಾ ಇದ್ದು ಅವರು ಕೆಲಸ ಜರಗಿಸಿದಂಥಾ ಕೋರ್ಟು ಯಾ ಕೋರ್ಟುಗಳ ಜಡ್ಜ್ ಯಾ ಜಡ್ಜ್‌ರುಗಳಿಂದ ಖಬಾಹುಷಿ ಸರಟಿ ಫಿಕೇಟ್ ಹಾಜರ್ಮಾಡಿದಲ್ಲಿ ಅಂಥಾವರ ವಿಷಯದಲ್ಲಿ VIನೇ ನಿಬಂಧನೆಯಿಂದ ವಿಧಿಸಲ್ಪಟ್ಟ ವಿದ್ಯಾ ವಿಷಯಿಕವಾದ ಯೋಗ್ಯತೆ ಯಿಲ್ಲದೆಯೇ ಅವರ ಅಪೇಕ್ಷಾನುಸಾರ ಇಂಗ್ಲೀಷ್ ಯಾ ಕನ್ನಡ ಭಾಷೆಯಲ್ಲಿ ಸದರೀ ಪರೀಕ್ಷೆ ತೆಗದುಕೊಳ್ಳತಕ್ಕದ್ದು."

"ಮೇಲ್ಕಂಡ ರಿಯಾಯಿತಿಯು, 1887 ಮತ್ತು 1888ನೇ ಇಸವಿಗಳಲ್ಲಿ ನಡಿಸಲ್ಪಡುವ ಪರೀಕ್ಷೆಗಳಿಗೆ ಮಾತ್ರ ಲಗಾವಾಗತಕ್ಕದ್ದು."

ತಾರೀಖು 11ನೇ ಫಿಬ್ರವರೀ 1887.

ನಂ. 240.— ಆನರೇರಿ ಸರ್ಜನ್ ಜೆ. ಸಾನ್ಸರ್ಮೆಯವರು, 1886ನೇ ಇಸವಿ ಡಿಶಂಬರ್ 18ನೇ ಮರ್ಕುಮಿನ ಮಧ್ಯಾನ್ನಾತ್ಪರ ಶಿವಮೊಗ್ಗಾ ಡಿಸ್ಟ್ರಿಕ್ಟಿನ ಮೆಡಿಕಲ್ ಚಾರ್ಜನ್ನು ಅಸಿಸ್ಟೆಂಟ್ ಸರ್ಜನ್ ಡಿ. ಜೋಕ್‌ಸಿಯವರಿಗೆ ಒಪ್ಪಿಸಿರುತ್ತಾರೆ.

ತಾರೀಖು 10ನೇ ಫಿಬ್ರವರೀ 1887.

ನಂ. 241.—ಚನ್ನಪಟ್ಟಣದ ಡೆಪ್ಯುಟಿ ಅಮಲ್ದಾರ್ ರಾಘವೇಂದ್ರರಾಯರಿಗೆ, ಡಿ. ವೆಂಕಟರಮಣಯ್ಯನವರು ರಜಾದ ಮೇಲಿರುವಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ ಕ್ಲೋಸ್‌ಪೇಟೆ ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸನೋಡುವಂತೆ ವೊಕರರ್ ಮಾಡಲ್ಪಟ್ಟಿರುತ್ತೆ.

ಕ್ಲೋಸ್‌ಪೇಟೆ ತಾಲ್ಲೂಕು ಶಿರಸ್ತೇದಾರ್ ಕೃಷ್ಣಪ್ಪನವರು, ರಾಘವೇಂದ್ರರಾಯರ ಗೈರ್ ಹಾಜರೀಯಲ್ಲಿ ಚನ್ನಪಟ್ಟಣದ ಡೆಪ್ಯುಟಿ ಅಮಲ್ದಾರರಾಗಿ ಆಕ್ಟಿಂಗ್ ತರೀಕ್ ಕೆಲಸನೋಡುವಂತೆ ವೊಕರರ್ ಮಾಡಲ್ಪಟ್ಟು, ಮೂರನೇ ಕ್ಲಾಸ್ ಮಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

262

ನಂ. 242.—1882ನೇ ಇಸವಿ Xನೇ ಆಕ್ಟಿಂಬ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 39ನೇ ಸೆಕ್ಷನ್ ಅನುಸರಿಸಿ, ಶ್ರೀರಂಗಪಟ್ಣದ ಅಮಲ್ದಾರ್ ವ 2ನೇ ಕ್ಲಾಸ್ ಮಾಜಿಸ್ಟ್ರೇಟರಾದ ರಾಘವೇಂದ್ರರಾಯರಿಗೆ ಸದರೀ ಕೋಡಿನ 32ನೇ ಸೆಕ್ಷನ್ ಅನುಗುಣವಾದ ಛಡಿ ಸಜಾ ಕೊಡತಕ್ಕ ಅಧಿಕಾರಗಳು ಉಂಟು ಮಾಡಲ್ಪಟ್ಟಿರುತ್ತೆ.

ನಂ. 243.—1882ನೇ ಇಸವಿ Xನೇ ಆಕ್ಟಿಂಬ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 327ನೇ ಸೆಕ್ಷನ್ ಅನುಸರಿಸಿ ಈ ಕೆಳಿ ಯಲ್ಲಿಯ ತಮಾಂ ಯರಡನೇ ಕ್ಲಾಸ್ ಮಾಜಿಸ್ಟ್ರೇಟರುಗಳೂ, ಸದರೀ ಕೋಡಿನ 32ನೇ ಸೆಕ್ಷನ್ ಅನುಗುಣವಾದ ಛಡಿ ಸಜಾ ಕೊಡತಕ್ಕ ಅಧಿಕಾರವನ್ನು ಯಿದರ ದೆಸೆಯಿಂದ ಉಂಟು ಮಾಡಲ್ಪಟ್ಟಿರುತ್ತಾರೆ.

ತಾರೀಖು 11ನೇ ಫಿಬ್ರವರೀ 1887.

ನಂ. 244.—1874ನೇ ಇಸವಿ ಆಗಸ್ಟ್ 31ನೇ ಮಕ್ಕಂ 153ನೇ ನಂಬರ್‌ವುಳ್ಳ ಮೈಸೂರು ಚೀಫ್ ಕಮ್ಮಿಷನರವರಿಂದ ಸಾದರ್ಪಡಿಸಲ್ಪಟ್ಟ ಇಸ್ತಿಹಾರ್‌ನಾಮೆಯನ್ನು ಬದಲಾಯಿಸಿ, ಯಿದರಡೀಕಂಡ ನಿಬಂಧನೆಗಳು ಸರ್ವರ ತಿಳುವಳಿಕೆ ಬಗ್ಯೆ 1878ನೇ ಇಸವಿಯ ಫಾರೆಸ್ಟ್ ರೂಲ್ಸ್ ಪ್ರಕಾರ ಪ್ರಕಟಿಸಲ್ಪಟ್ಟಿರುತ್ತೆ.

ಕೆಲವು ಕೆಲಸಗಳಿಗೋಸ್ಕರ ಬಗರ್ ರುಸುಂ ಮರ ವ ಬೊಂಬುಗಳನ್ನು ಕತರಾಯಿಸಿಕೊಳ್ಳುವ ಬಗ್ಯೆ ರೈತರುಗಳಿಗೆ ಕೊಡಲ್ಪಟ್ಟ ಹಕ್ಕುದಾರಿಯು, ಈಮೆಯ ಕೆಲವು ಪ್ರದೇಶಗಳಲ್ಲಿ ವಿಶೇಷವಾಗಿ ದುರುಪಯೋಗ ಪಡಿಸಲ್ಪಟ್ಟಿದೆ—ಶ್ರೀಮರ್ ಮಹಾರಾಜಾ ಸರ್ಕಾರದವರ ಜಾಹಿರಾತಿಗೆ ಬಂದಿರುವದರಿಂದ ಸದರೀ ಸರ್ಕಾರದವರು ಇದರ ದೆಸೆಯಿಂದ ಹುಕ್ಕುಂ ಮಾಡುವದೇನಂದರೆ, ಐಯಿಂದ—

1. ತನ್ನ ಜಮೀನುಗಳಿಗೋಸ್ಕರ ಸರಕಾರಕ್ಕೆ ಜರ್ಮೀ ಕಂದಾಯವನ್ನು ತೆರತಕ್ಕಂಥಾ ವಬ್ಬ ರೈತನು ದನದ ಕೊಟ್ಟಿಗೆಗಳಿಗೋಸ್ಕರ ಮರವನ್ನು ಅಪೇಕ್ಷಿಸಿದರೆ, ಅವನು ಇದಕ್ಕೆ ಶೇರಿಸಿರುವ ನಮೂನೆಯಲ್ಲಿ ತಾನು ವಾಸವಾಗಿರುವ ತಾಲ್ಲೂಕು ಅಮಲ್ದಾರರಲ್ಲಿ ಪ್ರಥಮತಃ ದರಖಾಸ್ತು ಕೊಡತಕ್ಕದ್ದು, ಸದರೀ ದರಖಾಸ್ತು ಡಿಟೋ ದರಖಾಸ್ತುದಾರ ವಾಸವಾಗಿರುವ ಗ್ರಾಮದ ಶ್ಯಾನುಭೋಗ ವ ಗೌಡನಿಂದ ರುಜುಮಾಡಲ್ಪಡತಕ್ಕದ್ದು.

2. ತರುವಾಯ ಅಮಲ್ದಾರರು, ವಾಸ್ತವ್ಯವಾಗಿ ಬೇಕಾಗಿರುವ ಮನ್ನಾ ಜಾತಿ ಅಲ್ಲದ ಮರ ವ ಬೊಂಬುಗಳ ತೇದಾದನ್ನು ಅಂದಾಜ್ ಮಾಡಿ (ಅಂಥಾ ಅಂದಾಜಿನ ಮೌಲ್ಯವು ದರಖಾಸ್ತುದಾರನು ಪಾವತೀ ಮಾಡತಕ್ಕ ವಂದು ಸಾಲಿನ ಕಂದಾಯಕ್ಕೆ ಜಾಸ್ತೀಯಾಗಿರ ಕೂಡದು) ಮಾಫಿ ರಹದಾರಿ ಕೊಡಲ್ಪಡುವ ಬಗ್ಯೆ ಡೆಪ್ಯುಟಿ ಕಮ್ಮಿಷನರಿಗಾಗಲೀ ಈ ಬಗ್ಯಾಗಿ ಸದರೀಯವರಿಂದ ಅಧಿಕಾರ ಕೊಡಲ್ಪಟ್ಟ ಇತರ ಆಫೀಸರಿಗಾಗಲೀ ಸಿಫಾರಸ್ ಮಾಡತಕ್ಕದ್ದು. ಸದರೀ ಮಾಫಿ ರಹದಾರಿಯು ಕೊಡಲ್ಪಟ್ಟರೆ ಅದು ಇದರಡೀಕಂಡ ನಮೂನೆಯಲ್ಲಿರ ತಕ್ಕದ್ದು.

3. ಅಂಥಾ ಮಾಫೀ ರಹದಾರಿಯನ್ನು ಉಂಟಾಗಿರುವ ಮನುಷ್ಯನು ಮರವನ್ನು ಕತರಾಯಿಸಿ ಭಂಡೀ ಮೂಲಕ ಸಾಗಿಸುವ ಬಗ್ಯೆ ಆಧಾರವಾದ ಸದರೀ ಪ್ಯಾಸನ್ನು ಯಾವದಾದರೂ ಪೊಲೀಸ್ ಯಾ ಫಾರೆಸ್ಟ್ ಆಫೀಸರಿಂದ ಅಪೇಕ್ಷಿಸಲ್ಪಟ್ಟಾಗ ಹಾಜರ್ಪಡಿಸತಕ್ಕದ್ದು. ಅವನು ತನಿಗೆ ಕೊಟ್ಟಿರುವ ವಾಯಿದೆವಳಗಾಗಿ ಮರ ಕಡಿದು ತನ್ನ ಗ್ರಾಮಕ್ಕೆ ಸಾಗಿಸಬೇಕು. ಗ್ರಾಮದ ಗೌಡನು ಸಾಗಿಸಲ್ಪಟ್ಟಿರುವ ಮರ ವ ಬೊಂಬುಗಳನ್ನು ಅಪ್ಪಣೆ ಕೊಡಲ್ಪಟ್ಟ ತೇದಾದಿನೊಂದಿಗೆ ಮೊಕ್ಕಾಬಿಲೆ ಮಾಡಿ, ಸದರೀ ಮಾಫೀ ರಹದಾರಿಯನ್ನು ಅವನ ವಶದಿಂದ ತೆಗದುಕೊಂಡು ಫರಾ ಮಾಡಿ ತಾಲ್ಲೂಕು ಅಮಲ್ದಾರರಲ್ಲಿಗೆ ರವಾನಿಸತಕ್ಕದ್ದು. ಅವರು ಅದನ್ನು ಡೆಪ್ಯುಟಿ ಕಮ್ಮಿಷನರಿಗೆ ರವಾನಿಸಬೇಕು. ಮರ ಮತ್ತು ಬೊಂಬುಗಳು ವಾಸ್ತವ್ಯವಾಗಿ ಆವಶ್ಯಕವಿದ್ದಾಗ ಮಾತ್ರವೇ ಮಾಫೀಯಾಗಿ ಕೊಡಲ್ಪಡುವದು, ಮತ್ತು ರೈತನ ಸಾಲಿಯಾನಾ ಕಂದಾಯದ ವಾಲ್ಯದಷ್ಟು ಮಟ್ಟಿಗೆ ಸಾಲೀಯಾನಾ ಕೊಡತಕ್ಕದ್ದಲ್ಲವು.

4. ಜನಗಳ ಪ್ರವೇಶಕ್ಕೆ ಬಂದು ಮಾಡುವದು ಆವಶ್ಯಕವೆಂದು ಕಾಣಬಂದಿರುವ ಅಡವಿಯೊಳಗೆ ಮನ್ನಾ ಜಾತಿ ಅಲ್ಲದ ಮರ ಮತ್ತು ಬೊಂಬುಗಳನ್ನು ಕತರಾಯಿಸುವ ಬಗ್ಯೆ ರಹದಾರೀ ಕೊಡಲ್ಪಟ್ಟಿರೆ, ಸದರೀ ರಹದಾರಿಯನ್ನು ಪಡೆದಿರುವ ಮನುಷ್ಯನು ಅಮಲ್ದಾರರ ಮುಖಾಂತ್ರ ವಾಪಸ್ ಮಾಡಿ, ಪ್ರವೇಶಕ್ಕೆ ಖಿಲ್ಲಾ ಯಿಡತಕ್ಕ ಅಡವಿಯಲ್ಲಿ ಮರ ಕತರಾಯಿಸುವ ಬಗ್ಯೆ ರಹದಾರೀ ಪಡೆಯತಕ್ಕದ್ದು.

5. ಫಾರೆಸ್ಟ್ ರೂಲ್ಸ್‌ಗಳ ಸಾಧಾರಣ ಚಲಾವಣೆಯಿಂದ ವಿನಾಯಿಸಲ್ಪಟ್ಟ ತಾಲ್ಲೂಕುಗಳಲ್ಲಿ ರೈತರುಗಳಿಗೆ ವಾಸಮಾಡುವ ಮನೆ ಮತ್ತು ದನಗಳ ಕೊಟ್ಟಿಗೆಗಳು ಕಟ್ಟುವ ಬಗ್ಯೆ ಮನ್ನಾ ಜಾತಿ ಅಲ್ಲದ ಮರಗಳು ಮತ್ತು ಬೊಂಬುಗಳು ಬೇಕಾಗಿರುವ ಪಕ್ಷದಲ್ಲಿ ಅವರು ಫಾರೆಸ್ಟ್ ಪಡೆದು ದನದ ಕೊಟ್ಟಿಗೆಗಳು ಕಟ್ಟುವ ಬಗ್ಯೆ ಮರ ಮತ್ತು ಬೊಂಬುಗಳನ್ನು ಪಡೆಯುವದಕ್ಕಾಗಿ ವಿಧಿಸಲ್ಪಟ್ಟ ಪದ್ಧತಿಯಂತೆಯೇ ರಹದಾರಿಗಳನ್ನು ಹೊಂದತಕ್ಕದ್ದು.

6. ಯಾವ ರೈತನಾಗಲಿ ಕ್ರಮವಾಗಿ ಮಾಫಿ ರಹದಾರಿಯನ್ನು ಪಡಿಯದೆ ತನ್ನ ದನದ ಕೊಟ್ಟಿಗೆಗಳಿಗೋಸ್ಕರ ಅಥವಾ ವಿನಾಯಿಸಲ್ಪಟ್ಟ ತಾಲ್ಲೂಕುಗಳಲ್ಲಿ ತನ್ನ ಮನೆಗೋಸ್ಕರವಾದರೂ ಕೊಟ್ಟಿಗೆ ಗೋಸ್ಕರವಾದರೂ ಮರ ಯಾ ಬೊಂಬುಗಳನ್ನು ಕತರಾಯಿಸಿರುವದಾಗಿ ತಪ್ಪು ಹೊರಿಸಲ್ಪಟ್ಟರೂ ಅಥವಾ ವಾಯಿದೆ ಮೀರಿ ಹೋದ ರಹದಾರಿಯನ್ನು ವಾಪಸ್ ಮಾಡದೆ ಯಿದ್ದರೂ ಯಾ ಅವನಿಗೆ

ಅಪ್ಪಣೆ ಕೊಡಲ್ಪಟ್ಟ ತೇದಾದನ್ನು ಮೀರಿದಾಗ್ಯೂ ಅಂಥಾ ಮನುಷ್ಯನು ಮೈಸೂರು ಫಾರೆಸ್ಟ್ ರೂಲ್‌ಸಿನ 40ನೇ ಸೆಕ್ಷನ್‌ನಲ್ಲಿ ವಿಧಿಸೋಣಾದ ದಂಡನೆಗಳಿಗೆ ಗುರಿಯಾಗತಕ್ಕದ್ದು.

7. ರೈತರುಗಳಿಗೆ ಜೀಸಾಯದ ಕೆಲಸಗಳಿಗೋಸ್ಕರ ಮನ್ನಾ ಜಾತಿ ಅಲ್ಲದ ಮರ ವ ಬೊಂಬುಗಳನ್ನು ತೆಗದುಕೊಳ್ಳುವ ಬಗ್ಗೆ ಉಂಟುಮಾಡಲ್ಪಟ್ಟ ಹಕ್ಕುದಾರಿಯು ಅವರುಗಳಿಂದ ದುರುಪಯೋಗಪಡಿಸಲ್ಪಡದೆ ಇರುವ ಬಗ್ಗೆ ಅಮಲ್‌ದಾರರು ಜವಾಬ್‌ದಾರರಾಗಿರತಕ್ಕದ್ದು. ತಮಾಂ ಅಮಲ್‌ದಾರುಗಳೂ, 1874ನೇ ಇಸವಿ ಏಪ್ರೆಲ್ 25ನೇ ಮಕ್ತುಂ 633—51ನೇ ನಂಬರ್ ವುಳ್ಳ ಚೀಫ್ ಕಮ್ಮಿಷನರವರ ಪ್ರೊಸಿಡಿಂಗ್ಸ್‌ಗೂ ಮತ್ತು ಫಾರೆಸ್ಟ್ ರೂಲ್‌ಸಿನಲ್ಲಿ ಉಪಯೋಗಿಸಲ್ಪಟ್ಟಂತೆ "ರೈತ" ನೆಂಬ ಶಬ್ದದ ಅರ್ಥವನ್ನು ವಿವರಿಸುವಂಥಾ ಮತ್ತು ವಿನಾಯಿಸಲ್ಪಟ್ಟ ತಾಲ್ಲೂಕುಗಳಿಗೆ ಫಾರೆಸ್ಟ್ ರೂಲ್‌ಸ್‌ಗಳ ಸಾಧಾರಣ ಜಲಾವಣಿಯು ಎಷ್ಟು ಮಟ್ಟಿಗೆ ಲಗಾವಾಗುವದಿಲ್ಲವೋ ಅದನ್ನು ವಿವರಿಸುವಂಥಾ 1879ನೇ ಇಸವಿ ಏಪ್ರೆಲ್ 23ನೇ ಮಕ್ತುಂ ವುಳ್ಳ 5ನೇ ನಂಬರ್ ಇಸ್ತಿಹಾರ್‌ನಾಮೆಗೂ ಸುದಾ ನಿಗೇ ಕೊಡತಕ್ಕದ್ದು.

8. ಮೇಲೆ ಕಂಡ ಹಕ್ಕುದಾರಿಗಳು, ಗ್ರಾಮ ಫಾರೆಸ್ಟ್ಸುಗಳು ವಿವರ್ಜಿಸು ಮಾಡಲ್ಪಡುವ ಅಥವಾ ಫಾರೆಸ್ಟ್ಸುಗಳ ಕ್ರಮವಾದ ಸಂರಕ್ಷಣೆಗೆ ಅನುಗುಣವಾದ ಯಾವದಾದರೂ ವಿಷ್ಟು ನಡವಳಿತಗಳು ವಿವರ್ಜಿಸು ಮಾಡಲ್ಪಡುವ ಪರಿಯಂತವೇ ಹಂಗಾಮಿಯಾಗಿ ವುಂಟು ಮಾಡಲ್ಪಟ್ಟಂತೆ ತಿಳಿಯತಕ್ಕದ್ದು, ಈ ಶೇಮೆಗೆ ಸರ್ವೆ ಮತ್ತು ಸೆಟಲ್‌ಮೆಂಟ್ ಜಾರಿಗೆ ತರಲ್ಪಟ್ಟ ಲಾಗಾಯತು ರೈತರುಗಳಿಗೆ ಅವರ ಜಮೀರ್ಾಗಳಲ್ಲಿ ಬೆಳೆಯುವ ಮರಗಳ ವಿಷಯದಲ್ಲಿ ಹೀರಳವಾದ ರಿಯಾಯತಿಯು ಉಂಟುಮಾಡಲ್ಪಟ್ಟಿರುವದರಿಂದ, ಈ ರೂಲ್ಸ್ ಅನುಸಾರವಾದ ರಿಯಾಯತಿಯು ಮೊತಾದ್ ಆಗಿರತಕ್ಕದ್ದು.

ದನದ ಕೊಟ್ಟಿಗೆಗೋಸ್ಕರ ಜೀಕಾದ ಮನ್ನಾ ಜಾತಿ ಅಲ್ಲದ ಮರ ಮತ್ತು ಬೊಂಬುಗಳಿಗಾಗಿ ಅಮಲ್‌ದಾರರಿಗೆ ಕೊಡುವ ದರಖಾಸ್ತಿನ ನಮೂನೆ:—

ರೈತನ ಹೆಸರು, ಹೋಬ್ಳಿ ಗ್ರಾಮದ ಹೆಸರು.	ಅವನು ತೆರುವ ಕಂದಾಯದ ಜೊಬಲಗು.	ಅವನಲ್ಲಿರುವ ದನಗಳ ಸಂಖ್ಯೆ.	ಮರ ಮತ್ತು ಬೊಂಬುಗಳು ಅಜ್ಜೆಕ್ಟ್ ದಫಾ ಯಾವಾಗ ಕೊಡಲ್ಪಟ್ಟವು.	ಹಾಲೀ ಅಪೇಕ್ಷಿಸಿರುವ ಮರ ಮತ್ತು ಬೊಂಬುಗಳ ತೇದಿ.	ಕೈಮತ್ತು.	ಅಮಲ್‌ದಾರರ ಸಹಿ.

ಮನ್ನಾ ಜಾತಿ ಅಲ್ಲದ ಮರ ಮತ್ತು ಬೊಂಬುಗಳಿಗೋಸ್ಕರ ರೈತರಿಗೆ ಕೊಡಲ್ಪಡುವ ಮೂಫಿ ರಹದಾರಿ ನಮೂನೆ:—

ತಾಲ್ಲೂಕು.	ರಹದಾರಿ ಪಡೆದವನ ಹೆಸರು, ಹೋಬ್ಳಿ ಮತ್ತು ಗ್ರಾಮ.	ಈತರಾಯಿಸ್ಸಬೇಕಾದ ದನಗಳ ಸಂಖ್ಯೆ.	ಯಾವ ಕೆಲಸದ ಬಗ್ಗೆ ಕೊಡಲ್ಪಟ್ಟಿತು.	ಭಂಡಿ ಜೋಡಿ ಪ್ರಕಾರ ತೇದಾದಿ.	ಸದರೀ ಸಾಮಾನು ಈತರಾಯಿಸಲ್ಪಡಬೇಕಾದ ಪ್ರದೇಶ.	ರಹದಾರಿಯು ನಾಪಸು ಮಾಡಲ್ಪಡಬೇಕಾದ ತಾರೀಖು.	ಅದು ನಾಪಸು ಮಾಡಲ್ಪಟ್ಟ ತಾರೀಖು.

ಮೊಕ್ಕಾಂ,
ತಾರೀಖು

ಡಿಪ್ಯೂಟಿ ಕಮ್ಮಿಷನರ್ ಯಾ
ಫಾರೆಸ್ಟ್ ಆಫೀಸರ್.